INDIAN JOURNAL OF HISTORY AND ARCHAEOLOGY
ISSN (e):2582-225Xwww.ijha.in
Vol-8, Issue -04,July-August, 2026
Page No,120-125
Peer -Reviewed, Refereed Journal

# ತೇಜಸ್ವಿಯವರ ಕಥೆಗಳ ಒಂದು ವಿಶ್ಲೇಷಣೆ

ಡಾ.ಸಿ.ಪುಟ್ಟೇಶ.[1]

ಕೆ.ಪಿ.ಪೂರ್ಣಚಂದ್ರ ತೇಜಸ್ವಿ ಕನ್ನಡ ಸಾಹಿತ್ಯದ ಅಪ್ರತಿಮ ಕಥೆಗಾರ. ಮಲೆನಾಡಿನ ಪ್ರಾಕೃತಿಕ ಮಡಿಲಲ್ಲಿ ಹುಟ್ಟಿ ಬೆಳೆದ ನವ್ಯ ಸಾಹಿತ್ಯದ ಯಶಸ್ವಿ ಕಥೆಗಾರರಾಗಿ ಗುರುತಿಸಿಕೊಂಡಿದ್ದಾರೆ. 1950 ಕಾಲಘಟ್ಟದಲ್ಲಿ ತಮ್ಮ ಕಥಾ ಬರವಣಿಗೆಯನ್ನು ಪ್ರಾರಂಭ ಮಾಡಿದ್ದಾರೆ. ಸಾಮಾನ್ಯ ಇವರ ಕಥೆಗಳಲ್ಲಿ ಜೀವನದ ಹಲವು ಮೌಲ್ಯಗಳು ಸಾರ್ವಕಾಲಿಕ್ಯವಾಗಿ ಚಿತ್ರಿತಗೊಂಡಿರುವುದನ್ನು ಕಾಣಬಹುದು. ಶ್ರೀಸಾಮಾನ್ಯನ ಬದುಕಿನ ಹಲವು ಮುಖಗಳು ಜೀವನ ಸ್ಫೂರ್ತಿಯ ಹಲವು ಹೊಳವುಗಳನ್ನು ಕಾಣಬಹುದಾಗಿದೆ ಹಾಗೆ ಮನುಷ್ಯನ ಯಶಸ್ಸು ಮತ್ತು ವೈಫಲ್ಯವನ್ನು ತಮ್ಮ ಕಥೆಗಳ ಮೂಲಕ ಚಿತ್ರಿಸಿದ್ದಾರೆ. ಇಲ್ಲಿ ಸಾಹಿತ್ಯ ಕಲಾತ್ಮಕತೆ, ಜೀವನ ಗ್ರಹಿಕೆಯ ಸೂಕ್ಷ್ಮತೆ ಮತ್ತು ಅರ್ಥಪೂರ್ಣತೆಯು ತೇಜಸ್ವಿ ಕಥೆಗಳಲ್ಲಿ ಕಾಣಬಹುದು.

ಸಾಹಿತ್ಯ ಎಂಬುದು ಜೀವನದ ಕೈಗನ್ನಡಿ ಅದು ಸಮಾಜದಲ್ಲಿ ನಡೆಯುತ್ತಿರುವ ದಿನ ನಿತ್ಯದ ಘಟನೆಗಳನ್ನು ಅವಲೋಕಿಸುತ್ತದೆ ಹಾಗೆ ಕಥಸಾಹಿತ್ಯವು ಕೂಡ ಬದುಕಿನ ಹಲವು ಮಜಲುಗಳನ್ನು ಅನಾವರಣಗೊಳಿಸುತ್ತದೆ. ಅಂದರೆ ತೇಜಸ್ವಿಯವರ ಕಥೆಗಳಲ್ಲಿ ಕಂಡುಬರುವ ಹಲವು ವಿಚಾರಗಳು ಸಾರ್ವಕಾಲಿಕ ಅಂಶಗಳಾಗಿ ಕಾಣುತ್ತದೆ ಉದಾಹರಣೆಗೆ ಮನುಷ್ಯ ಮತ್ತು ಪ್ರಕೃತಿ ಸಂಬಂಧ, ಮನುಷ್ಯ ಮತ್ತು ಪ್ರಕೃತಿಯ ನಡುವೆ ಹೊಂದಾಣಿಕೆಯಾಗದೆ ವಿಕೃತಿ ಸಮಾಜದಲ್ಲಿನ ಭ್ರಷ್ಟಚಾರ ಮೌಢ್ಯತೆ ಮುಂತಾದವುಗಳನ್ನು ಕಾಣಬಹುದು .

ಬೀರಿದ ವಿಚಾರಧಾರೆಗಳು ತೇಜಸ್ವಿಯವರೇ ಹೇಳಿಕೊಂಡಂತೆ ತಮ್ಮ ಮೇಲೆ ಪ್ರಭಾವ (1) ಲೋಹಿಯರವರ ವಿಚಾರವಾದ (2) ಕುವೆಂಪುರವರ ವಿಚಾರಧಾರೆ (3) ಕಾರಂತರೆ ಬದುಕಿನ ಕಲಾತ್ಮಕತೆ ಹೀಗೆ ತೇಜಸ್ವಿಯವರ ಕಥಾಸಾಹಿತ್ಯ ವಿಶಿಷ್ಟವಾದ ಆಯಾಮಗಳನ್ನು ಪಡೆದುಕೊಂಡಿದ್ದು ಇವರ ಪ್ರತಿಭಾ ಸಂಪನ್ನತೆಯಿಂದ ಮೂರು ಕಥಾಸಂಕಲನ ಅರಳಿದ್ದು ಅದರ ಮೊದಲೆ ಪ್ರತಿಭಾ ಕುಸುಮವಾಗಿ 'ಹುಲಿಯೂರಿನ ಸರಹದ್ದು' ಎಂಬ ಕಥಾಸಂಕಲನ ಇದರಲ್ಲಿ ಆರು ಕಥೆಗಳಿದ್ದು ಇವು ತೇಜಸ್ವಿಯವರ

1. ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ,ಸರ್ಕಾರಿ ವಿಜ್ಞಾನ ಕಾಲೇಜು, ಬೆಂಗಳೂರು

ಪ್ರಾರಂಭದ ಕಥೆಗಳಾಗಿ ಗುರುತಿಸಿಕೊಂಡಿದೆ ಈ ಕಥಾಸಂಕಲನದಲ್ಲಿ 'ಲಿಂಗ ಬಂದ' 'ಪಂಜೆಳ್ಳಿ ಪಿಶಾಚಿಯ ಸವಾಲು' 'ಗುಡುಗು ಹೇಳಿದ್ದೇನು' 'ಊರ್ವಶಿ' 'ಹುಲಿಯೂರಿನ ಸರಹದ್ದು' 'ಗಾಂಧೀಜಿ ದೆಸೆಯಿಂದ' ಈ ಕಥೆಗಳು ವಸ್ತುವಿನ ದೃಷ್ಟಿಯಿಂದ ಧೋರಣೆಯಿಲ್ಲ, ಆದರೆ ಕಲಾತ್ಮಕತೆ ಮತ್ತು ಸೂಕ್ಷ್ಮವಾದ ಅಭಿವ್ಯಕ್ತಿಯಿಂದ ಕೂಡಿದೆ.

ಲಿಂಗಬಂಧ ಕಥೆಯು ಮಳೆಯ ತಾಡನದಿಂದಲೇ ಪ್ರಾರಂಭವಾಗಿದ್ದು ಪ್ರಕೃತಿಯ ಅಟ್ಟಹಾಸ ಪ್ರಕೃತಿ ಮತ್ತು ಮನುಷ್ಯನ ಅವಿನಾಭಾವ ಸಂಬಂಧ ಕೌಟುಂಬಿಕ ವಿಸ್ಮಯ, ಕುಟುಂಬದ ತಲ್ಲಣಗಳು ಕಥೆಯನ್ನು ಎಣೆಯುವ ನೈಪುಣ್ಯತೆಯನ್ನು ಕಾಣಬಹುದು. ಇಲ್ಲಿ ಮಗುವಿನ ಮನಸ್ಸನ್ನು ಆವರಿಸಿರುವ ಭಯ, ಆತಂಕಗಳು, ಚಿಕ್ಕಮಕ್ಕಳಲ್ಲಿ ಭಯ ಹೇಗೆ ಮೊಳಕೆ ಹೊಡೆದು, ಹಾಗೇ ಸಮಾಜದಲ್ಲಿ ಭಯಎಂಬುದು ವ್ಯಕ್ತಿಯ ವ್ಯಕ್ತಿತ್ವವನ್ನು ಹೇಗೆ ಕುಗ್ಗಿಸುತ್ತದೆ ಮತ್ತು ಮನೋವೈಜ್ಞಾನಿಕ ನೆಲೆಯನ್ನು ಗುರುತಿಸಬಹುದು ಆದ್ದದರಿಂದ ಭಯ, ಕಾತರ, ಆತಂಕ, ಮತ್ತು ಮನಸ್ಸಿನಲ್ಲಿ ಉಂಟಾಗುವ ತಲ್ಲಣಗಳು ಅದಕ್ಕೆ ಪೂರಕವಾಗಿ ಮಳೆಯ ರುದ್ರನರ್ತನ ಗುಡುಗು, ಮಿಂಚು, ಸಿಡಿಲು, ಕಿಟ್ಟಿ, ಸುಭದ್ರೆ, ಇವರು ಭಯಪಡುವ ಸನ್ನಿವೇಶ ಹಳೆಪೈಕದ ಸದ್ದಿ ಹೇಳಿದ ಕಥೆ ಕಿಟ್ಟಿಯ ಮನಸ್ಸಿನಲ್ಲಿ ಯಾವಾಗಲೂ ಕಾಡುತ್ತದೆ.

ಸಾಮಾನ್ಯವಾಗಿ ಅವಿಭಕ್ತ ಕುಟುಂಬದಲ್ಲಿ ಅಜ್ಜಿ ಹೇಳಿದ ಕಥೆಗಳ ರೂಪದಲ್ಲಿ ಭೂತದ ಕಥೆಗಳು ಅತಿಮಾನುಷ ಕಥೆಗಳು ರೋಮಾಂಚನಕಾರಿ ಕಥೆಗಳು ಜೀವತೆಳೆದಿದ್ದು ಇವುಗಳಲ್ಲಿ ಭೂತದ ಕಥೆಗಳು ಭಯವನ್ನು ಇಮ್ಮಡಿಗೊಳಿಸುತ್ತದೆ. ಹಳೆಪೈಕದ ಸಿದ್ದು ಹೇಳಿದ ರಾಕ್ಷಸನ ಕಥೆ ವಿಸ್ಮಯ ಪ್ರಪಂಚವನ್ನು ಸೃಷ್ಟಿ ಮಾಡಿದ್ದು ಭಯ ಮತ್ತು ರೋಮಾಂಚನಕಾರಿ ಆತಂಕದ ವಾತಾವರಣವನ್ನು ಉಂಟು ಮಾಡುತ್ತದೆ. ಈ ಕಥೆಯಲ್ಲಿ ಮಗುವಿಗೆ ಕೋರೆ ಹಲ್ಲು ಬೆಳೆಯುತ್ತ ಹಾಗೇ ಕ್ಷಣಕ್ಷಣಕ್ಕು ಮಗು ಬೆಳೆಯುತ್ತಾ ಹೋಗುವುದು.

ಆನಂತರ ತೊಟ್ಟಿಲು ಮುರಿಯುವುದು ಮಗುವಿನ ಅಳು ಮಳೆಯ ಆರ್ಭಟದೊಂದಿಗೆ ಕೂಡಿಕೊಂಡು ವಿಭಿನ್ನವಾಗಿ ಕಾಣುತ್ತದೆ ಇದು ಮಕ್ಕಳ ಮುಗ್ಧ ಮನಸ್ಸಿನ ಮೇಲೆ ಪ್ರಭಾವ ಬೀರಿ ಭಯದ ಸುಳಿಯಲ್ಲಿ ತೊಳಲುವಂತೆ ಮಾಡಿವೆ ಭಯ ಎಂಬುದು ಹೀಗೆ ಸಾರ್ವಕಾಲಿಕವಾಗಿ ಹಲವು ರೂಪಗಳಲ್ಲಿ ಗೋಚರಿಸುತ್ತದೆ.

ಮೌಢ್ಯತೆ ಮತ್ತು ಕಂದಾಚಾರ ಮನುಷ್ಯನ ಆಧುನಿಕ ಬದುಕಿನಲ್ಲಿ ಪ್ರಭಾವ ಬೀರಿ ಆಚರಣೆಯ ರೂಪಗಳಾಗಿ ಕಂದುಬರುತ್ತದೆ ತೇಜಸ್ವಿಯವರ ಕಥೆ ಪಂದ್ರೋಳ್ಳಿ ಪಿಶಾಚಿಗಳ ಸವಾಲು ಕಥೆಯಲ್ಲಿ ಕಾಣುವ ಅಂಶಗಳು ಪ್ರತಿಯೊಬ್ಬರ ಬದುಕಿನಲ್ಲಿ ಎದುರಾಗುವ ದೆವ್ವ, ಭೂತ, ಮಾಟ, ಮಂತ್ರ, ಮುಂತಾದ ಮೌಢ್ಯತೆಯ ಹೆಸರಿನಲ್ಲಿ ನಡೆಯುವ ಅನೇಕ ಅನಾಚಾರಗಳನ್ನು ಕಾಣಬಹುದು ಈ ಕಥೆಯಲ್ಲಿ ಕಥೆಗಾರರು ತಮ್ಮ ಬಾಲ್ಯದ ನೆನಪುಗಳನ್ನು ಮೆಲುಕು ಹಾಕುವಲ್ಲಿ ತಮ್ಮ ವಿಚಾರಗಳನ್ನು

ಚರ್ಚಿಸಿದ್ದಾರೆ ಮನುಷ್ಯ ವೈಚಾರಿಕವಾಗಿ ಎಷ್ಟೇ ಮುಂದುವರೆದಿದ್ದರು ಇಂದಿಗೂ ಸಂಪ್ರದಾಯ ಮೌಢ್ಯತೆಯ ಕಂದಾಚಾರಗಳಲ್ಲಿ ಅಂದರೆ ಒಂದೇ ನಾಣ್ಯದ ಎರಡು ಮುಖಗಳಂತೆ ಒಂದಕ್ಕೊಂದು ಹಿಂಬಾಲಿಸಿಕೊಂಡು ಬಂದಿದೆ ಮನುಷ್ಯನ ಬದುಕಿನಲ್ಲಿ ಶಾಶ್ವತ ಸ್ಥಾನ ಪಡೆದುಕೊಂಡು ಮನುಷ್ಯ ಸಂಪ್ರದಾಯದ ಸಂಕೋಲೆಯಿಂದ ಹೊರಬರಲಾರದೆ ಹೊಂದಾಣಿಕೆಯನ್ನು ಮಾಡಿಕೊಳ್ಳಲಾಗದೆ ಕಾಲದ ಕೈಗೆ ಸಿಕ್ಕಿ ಬಸವಳಿದಿರುವ ಸಂಗತಿಯನ್ನು ಕಾಣಬಹುದು ತೇಜಸ್ವಿಯವರ ಕಥೆಗಳಲ್ಲಿ ಕೂಡ ಅವರೇ ಹೇಳಿರುವಂತೆ ಎಡ್ವರ್ಡ್, ರಾಮಣ್ಣ ಇತರರಿಗೆ ನಿರೂಪಕ ತಾನು ಅಜ್ಜಿಯಿಂದ ಕೇಳಿದ ಕಥೆಯನ್ನು ವಿದ್ಯಾರ್ಥಿನಿಲಯದಲ್ಲಿ ಹೇಳಿ ಅವರಲ್ಲಿ ಭಯದ ವಾತಾವರಣ ಉಂಟುಮಾಡುವುದು ಇದು ಮಕ್ಕಳಿಂದ ತಮ್ಮ ಕಾರ್ಯನಿರ್ವಹಣೆಗೆ ಕುತ್ತು ಬರದಿರಲ್ಲಿ ಎಂಬಂತೆ ಹಿರಿಯರು ಕೆಲವು ತಂತ್ರಗಾರಿಕೆಯನ್ನು ಬಳಸಿರುವುದನ್ನು ಕಾಣಬಹುದು.

"ಗುಡುಗು ಹೇಳಿದ್ದೇನು" ಈ ಕಥೆಯಲ್ಲಿ ಕೂಡ ಮಲೆನಾಡಿನ ಸುಂದರ ಪರಿಸರದ ಜೊತೆಗೆ ಸೋಮಾರಿ ಅಣ್ಣತಮ್ಮಂದಿರು ಸಮಾಜದ ಜಡತ್ವದ ರೂಪವಾಗಿ ಮತ್ತು ವಿಕೃತ ಮನಸ್ಥಿಯ ಸಂಕೇತವಾಗಿ ಕಂಡುಬಂದಿದ್ದು ಅಜ್ಜಿಯ ದುರಂತ ಸಾವಿಗೆ ಕಾರಣವಾಗಿದೆ. ಹೀಗಿನ ಸಮಾಜದಲ್ಲೂ ಕೂಡ ವಯಸ್ಸಾದ ತಂದೆ ತಾಯಿಗಳನ್ನು ಮಕ್ಕಳು ಸರಿಯಾಗಿ ಪೋಷಣೆ ಮಾಡದೆ, ಅವರ ಭಾವನೆಗಳಿಗೆ ಸ್ಪಂದಿಸದೆ ಅತಿಮಾನುಷ್ಯವಾಗಿ ನಡೆದುಕೊಳ್ಳುವ ನಿರ್ಧಯಿ ಮನಸ್ಥಿತಿಗಳು ಹಿಂದು ಹೆಚ್ಚಾಗುತ್ತಿರುವುದು ಶೋಚನಿಯವಾಗಿದೆ – ಹಿಂದಿನ ಕಾಲದಲ್ಲಿ ಕುಟುಂಬದಲ್ಲಿಯಿದ್ದ ಪ್ರೀತಿ, ಸ್ನೇಹ, ಸಲುಗೆ, ನವಿರಾದ ಅನುಭವ ಕುಟುಂಬ ರಕ್ಷಣೆ ನೆಮ್ಮದಿ ಹಿಂದು ಯಾಂತ್ರಿಕೃತ ಬದುಕಿನಲ್ಲಿ ಕ್ಷೀಣಿಸುತ್ತ ಬಂದಿದೆ. ಇಂದಿನ ಜನರ ಮನಸ್ಥಿತಿ ಪ್ರೀತಿ, ವಾತ್ಸಲ್ಯ ಬಾಂದವ್ಯಗಳಿಲ್ಲದೆ ವ್ಯವಹಾರಿಕ ದೃಷ್ಟಿಕೋನದಿಂದ ನೋಡುವಂತಾಗಿದೆ. ಕುಟ್ಟುಂಬದಿಂದ ತಂದೆ ತಾಯಿಗಳನ್ನು ಹೊರಹಾಕಿರುವ ಹೃದಯ ವಿದ್ರಾವಕ ಘಟನೆಗಳು ನಮ್ಮ ಕಣ್ಣುಮುಂದೆ ಇವೆ. ಈ ಕಥೆಯಲ್ಲಿ ಕಂಡುಬರುವ ಸೋಮ ಮತ್ತು ಲಕ್ಕ ತಮ್ಮ ಮನೆಯ ಕುಟುಂಬದ ಸದಸ್ಯೆಯನ್ನು ಪರಿಹಾರದ ಧನಕ್ಕಾಗಿ ಕಾರಿನ ಚಕ್ರಕ್ಕೆ ಸಿಕ್ಕಿಸಿ ಸಾಯಿಸುತ್ತಾರೆ ಇದು ಮಾನವಿನ ಸಂಬಂಧಗಳು ಸ್ವಾರ್ಥದ ಎದುರು ನಿಷ್ಪ್ರಯೋಜಕವಾಗಿದ್ದು ಮಾನವ ಸಂಬಂಧಗಳ ನೆಲೆ ಕಳೆದುಕೊಳ್ಳುತ್ತಿದೆ ಮಾನವ ದೂರ್ತ ಆವರ್ತನೆಗಳು ಗುಡುಗು ರೂಪದಲ್ಲಿ ಮರುಕಳಿಸುತ್ತವೆಯೇನೋ ಅನ್ನಿಸುತ್ತದೆ.

'ಗಾಂಧೀಜಿ ದೆಸೆಯಿಂದ' ಎಂಬ ಕಥೆಯಲ್ಲಿ ಗಾಂಧೀಜಿಯ ಆದರ್ಶ, ಆಕರ್ಷಕ ನಿಷ್ಕಾಮ ಗುಣಗಳು ಮತ್ತು ಸಂಗತಿಗಳು ಅರ್ಥಹೀನತೆಯನ್ನು ಪಡೆದುಕೊಂಡಿವೆ. ಗಾಂಧೀಜಿಯವರ ರಾಮರಾಜ್ಯದ ಕಲ್ಪನೆ, ಯುವಶಕ್ತಿಯ ಸಂಘಟಿಸಿಕೊಳ್ಳುವಿಕೆ, ಗ್ರಾಮ ಸ್ವರಾಜ್ಯ ಸತ್ಯ,ಅಹಿಂಸೆ ಈ ಕಲ್ಪನೆಗಳು ತಮ್ಮ ಅರ್ಥವ್ಯಾಪ್ತಿಯನ್ನು ಆಧೂಕ ಬದುಕಿನಲ್ಲಿ ವಿಸ್ತರಿಸಿಕೊಳ್ಳಲಾಗದೆ ಸೊರಗುತ್ತಿವೆ ಈ ಕಥೆಯ ಕೇಂದ್ರ ಪಾತ್ರ

ಮೋಹನದಾಸ ಈತ ಗಾಂಧೀಜಿಯ ಆದರ್ಶ ವಿಚಾರಗಳಿಗೆ ಗೌರವ ಕೊಟ್ಟು ಸತ್ಯದ ಹಿಂದೆ ಹೋದಾಗ ಎದುರಿಸುವ ಕನಿಷ್ಠ ಸಮಸ್ಯೆಗಳು ಸತ್ಯ, ಅಹಿಂಸೆ, ಧರ್ಮನೈತಿಕತೆ ದೂರ್ತ ವ್ಯವಸ್ಥೆಯ ಅಡಿಯಲ್ಲಿ ಸಿಲಿಕಿ ಅರ್ಥವಂತಿಕೆಯನ್ನು ಕಳೆದುಕೊಳ್ಳುತ್ತಿದೆ ಮೋಹನದಾಸ ನಾನು ಪಾಪಿ ಎಂದು ಹೇಳಿ ಕ್ಷಮೆಯಾಚಿಸುವ ಘಟನೆ ಮೋಹನದಾಸನ ತಂದೆಗೆ ಅದನ್ನು ಸ್ವೀಕರಿಸುವ ಮನಸ್ಥಿತಿ ಇಲ್ಲವಾಗಿದೆ ಮಗನ ಸತ್ಯದ ಆದರ್ಶ ಗುಣವನ್ನು ಅವರು ಗಮನಿಸದೆ ವ್ಯಂಗ್ಯದ ರೀತಿಯಲ್ಲಿ ಅನುಮನಾಸ್ಪದವಾಗಿ ಗ್ರಹಿಸುವ ಪರಿ ಪ್ರಸ್ತುತ ಸಮಾಜದ ಕರಾಳಮುಖಗಳನ್ನು ದರ್ಶಿಸುತ್ತದೆ, ಆದರ್ಶಗುಣಗಳು ಆಧುನಿಕ ಸಮಾಜದಲ್ಲಿ ಅರ್ಥಹೀನತೆಯನ್ನು ಸೂಚಿಸುವಂತೆ ಕಾಣುತ್ತದೆ.

'ಊರ್ವಶಿ' ಕಥೆಯಲ್ಲಿ ಕಾಣುವಂತೆ ಕೌಟುಂಬಿಕ ವಿಘಟನ ಅಂಶಗಳು, ಸಂಬಂಧಗಳಲ್ಲಿನ ಬಿರುಕು ಶೋಕಿತನ ಖಾಯಾಲಿ ಮುಂತಾದ ಅಂಶಗಳು ಪ್ರತಿನಿಧಿಸಿರುವುದನ್ನು ಕಾಣಬಹುದು.

ಅಬಚೂರಿನ ಪೋಸ್ಟ್ ಆಫೀಸ್ 7 ಕಥೆಗಳ ಕಥಾಸಂಕಲನ. ಈ ಕಥಾಸಂಕಲನದಲ್ಲಿ ತ್ಯಕ್ತ, ಅವನತಿ, ಕುಬಿ ಮತ್ತು ಇಯಾಲ, ತುಕ್ಕೋಜಿ, ತಬರನಕಥೆ, ಅಬಚೂರಿನ ಪೋಸ್ಟ್ ಆಫೀಸ್ ಎಂಬ ಹಲವು ಕಥೆಗಳಿಗೆ ಈ ಕಥೆಗಳಲ್ಲಿ ಪ್ರಮುಖವಾಗಿ ತೇಜಸ್ವಿಯವರ ಕಥನಾಗುಣ ಪ್ರತಿಬಿಂಬಿತಗೊಂಡಿರುವುದನ್ನು ಕಾಣಬಹುದು ಅಬಚೂರಿನ ಪೋಸ್ಟ್ ಆಫೀಸ್ ಸಮಾಜದಲ್ಲಿ ನಡೆಯುವ ಅನೇಕ ಘಟನೆಗಳನ್ನು ಚರ್ಚಿಸುತ್ತದೆ ಆಧುನಿಕತೆಯ ಸ್ಪರ್ಶ, ಸಂಸರ್ಗದಿಂದಾಗಿ ಮಲೆನಾಡಿನ ಪ್ರದೇಶಕ್ಕೆ ಸಾರಿಗೆ ಸಮೂಹ ಮಾಧ್ಯಮ, ಸಂಪರ್ಕ ಮಾಧ್ಯಮ ಆಧುನಿಕತೆಗೆ ಒಗ್ಗಿಕೊಳ್ಳದೆ ಒಗ್ಗಿಕೊಂಡ ಮನಸ್ಸು ಆಗಮನದಿಂದಾಗಿ ಪರಂಪರಯುಕ್ತ ಮನಸ್ಸುಗಳು ಜೀವನದ ಗೊಂದಲಮಯವಾದ ಸ್ಥಿತಿಗೆ ಕೊಂಡೊಯ್ಯಲ್ಪಡುವುದನ್ನು ಗುರುತಿಸಬಹುದು ಈ ಕಥೆಯಲ್ಲಿ ಕೌಟುಂಬಿಕ ಚಿತ್ರಗಳ ಹಲವು ಮುಖಗಳು, ಗಂಡ ಹೆಂಡತಿ ಸಂಬಂಧ, ಗ್ರಾಮ ರಾಜಕೀಯ, ಕೌಟುಂಬಿಕ ಸಂಘರ್ಷದಿಂದ ಕುಟುಂಬದ ನೆಮ್ಮದಿ ಕಡಿಮೆಯಾಗುತ್ತಿರುವುದು ಕಾಣಬಹುದಾಗಿದೆ.

ಬೋಬಣ್ಣನ ಕುಟುಂಬದಲ್ಲಿ ಸಾಂಸಾರಿಕ ನೆಮ್ಮದಿ ಪ್ರಾರಂಭದಲ್ಲಿ ಇದ್ದು ಅನಂತರ ಅದು ಆಳಾಗಿ ದುರಂತ ಹಾದಿ ಹಿಡಿಯುವುದು ಪ್ರಸ್ತುತ ಸಮಾಜಕ್ಕೆ ಹಿಡಿದ ಕೈಗನ್ನಡಿ. ಬೋಬಣ್ಣ ಅತ್ತೆ ಮಾಚಮ್ಮ ಹೆಂಡತಿ ಕಾವೇರಿ ಬೋಬಣ್ಣನ್ನು ನಿಯಾಂತ್ರಣದಲ್ಲಿ ಇಟ್ಟಿಕೊಳ್ಳಲು ಪ್ರಯತ್ನಿಸುತ್ತಾರೆ ಕೊನೆಗೆ ಬೋಬಣ್ಣ ಮಾನಸಿಕವಾಗಿ ಜರ್ಜರಿತಗೊಂಡು ಕುಟುಂಬದಲ್ಲಿ ತನ್ನ ಅಸ್ತಿತ್ವವನ್ನು ಕಳೆದುಕೊಂಡು ಪಡಿಪಾಟಲು ಪಡುತ್ತಾನೆ ಅಜೀಜನಿಗೆ ಬಂದ ಪತ್ರ ಹೀಗೆ ಹಲವು ಅಂಶಗಳು ಮಾನಸಿಕ ನೆಮ್ಮದಿಯನ್ನು ಕಳೆದುಕೊಳ್ಳೂವಂತೆ ಮಾಡಿದೆ ಕೊನೆಗೆ ಬೋಬಣ್ಣನ ಹೆಂಡತಿಯ ಅಸಹಾಕಾರ ಮಾಚಮ್ಮ ನ ದೂರ್ತತನ ಅಧುನಿಕ ನಾಗರುಕತೆಯ ಪ್ರವೇಶಕ್ಕೆ ಪ್ರತೀಕವಾಗಿ ನಾಗರೀಕತೆ ಮತ್ತು ವ್ಯಕ್ತಿ ಸಮಸ್ಯೆಗಳ ತಾಕಲಾಟ ಈ ಕಥೆಯಲ್ಲಿ ಸೂಕ್ಷ್ಮವಾಗಿ ಕಂಡುಬರುತ್ತದೆ.

**"ಅವನತಿ"** ಕಥೆಯಲ್ಲಿ ಕೂಡ ಒಬ್ಬ ಕಲೆಗಾರನ ಬದುಕಿನ ಅವನತಿಯನ್ನು ಕಾಣಬಹುದು ಸೂರಚಾರಿ ಈ ಕಥೆಯ ನಾಯಕನಾಗಿದ್ದು ತನ್ನ ಬದುಕಿನಲ್ಲಿ ಅಸ್ತಿತ್ವವನ್ನು ಉಳಿಸಿಕೊಳ್ಳಲಾಗದೆ ಮತ್ತು ಕಲಾವಂತಿಕೆಯನ್ನು ಬಳಸಿಕೊಳ್ಳಲಾಗದೆ ಮಾನಸಿಕ ತೊಳಲಾಟಕ್ಕೆ ಒಳಗಾಗುವ ಸನ್ನಿವೇಶವನ್ನು ಕಾಣಬಹುದು ಹಾಗೇ ಅಜ್ಞಾನ, ಅಂಧಕಾರ, ಭೂತ ಪ್ರೇತ, ಮಾರಿ, ಮಸಣಿಯರು, ಬಗ್ಗೆ ಇರುವ ಅಗಾಧವಾದ ನಂಬಿಕೆ ಮುಂತಾದ ಚಿತ್ರಿಸಲಾಗಿದೆ ಈ ಅವೈಜ್ಞಾನಿಕ ವೈದ್ಯಕಿಯ ಪದ್ಧತಿಗಳು ಸುರಚಾರಿಯ ಕುಟುಂಬವನ್ನು ಮೇಲೆತ್ತಲ್ಲು ಸಾಧ್ಯವಾಗಿಲ್ಲ.

**"ಕುಬಿ ಮತ್ತು ಇಯಾಲ"** ಈ ಕಥೆಯಲ್ಲಿ ನಂಬಿಕೆ ಮತ್ತು ಪ್ರೌಢ್ಯತೆ ಒಳ್ಳೆತನ ಮತ್ತು ಕೆಟ್ಟತನ ಜ್ಞಾನ ಅಜ್ಞಾನ ಈ ವಿಭಿನ್ನತೆಗಳ ನಡುವೆ ಬದುಕನು ಕಟ್ಟಲು ಅವಣಿಸುತ್ತಿರುವ ಒಬ್ಬ ವ್ಯಕ್ತಿಯ ಚಿತ್ರಣವನ್ನು ಕಾಣಬಹುದು ಇಲ್ಲಿ ಸಮಾಜದ ಚಲನವಲನವನ್ನು ಅತ್ಯಂತ ಸೂಕ್ಷವಾಗಿ ಗ್ರಹಿಸುವ ವೈದ್ಯಶ್ಯಗಳನ್ನು ಮುಖಾಮುಖಿಯನ್ನಾಗಿಸಿ ಓದುಗರು ಚಿಂತಿಸುವಂತೆ ಮಾಡಲಾಗಿದೆ.

ಭೈರಪುರದ ಜನರ ಮೌಢ್ಯತೆ ನಗರೀಕರಣ ಅಮಾನವಿಯತೆ, ಕೊಲೆ, ಅಸಹಾಯಕ ಕಥೆ ಪ್ರಸ್ತುತ ಜನರ ಸನ್ನಿವೇಶಕ್ಕೆ ಅನುಗುಣವಾಗಿ ಚಿತ್ರಿತವಾಗಿದೆ ಈ ಕಥೆಯಲ್ಲಿ ಕಾಣುವ ಇಯಾಲಳ ಸಾವು ಆ ತಂದೆ ತಾಯಿಗಳ ಮುಗ್ಧತೆ ಕುಬಿಯ ವಿಚಾರವಾದ ಸಮಾಜದೊಡನೆ ಸಂವಹನ ಸಾದಿಸದೆ ವಿಫಲವಾಗುವ ಹೀಗೆ ಅಜ್ಞಾನ ಮೂಡನಂಬಿಕೆಗಳು ಸಂಕೀರ್ಣ ಬದುಕಿನಲ್ಲಿ ವೈಜ್ಞಾನಿಕ ಸತ್ಯಗಳು ಅನುಭವಿಸುವ ಸೋಲನ್ನು ಗುರುತಿಸಬಹುದು.

ತುಕೋಜಿ ಕಥೆ ಆಧುನಿಕತೆಯ ಆಕ್ರಮಣದಿಂದ ಹಳ್ಳಿಯ ಪರಿಸರದಲ್ಲಿ ಉಂಟಾಗುವ ಬದಲಾವಣೆಯ ಪರಿಯನ್ನು ವರ್ಣಿಸುವ ಕಥೆ ತುಕೋಜಿ ನಾಗರಿಕತೆಯ ಸೆಳೆತಕ್ಕೆ ಸಿಕ್ಕಿ ಅನುಭವಿಸುವ ತೊಂದರೆ ಕಾಣಬಹುದು.

ತಬರನಕಥೆ ಪ್ರಮಾಣಿಕತೆಯ ದುರಂತೆ ಕಥೆಯ ಎಳೆವೊಂದಿದ್ದು ಬ್ರಿಟೀಷ್ ಮತ್ತು ಭಾರತೀಯ ಅಧಿಕಾರಿಗಳ ಇಬ್ಬಂದಿತನ ಸಿಲುಕಿ ಅವಲತ್ತಿ ಮತಿಭ್ರಷ್ಟ ತಬರನ ಕಥೆಯನ್ನು ಕಾಣಬಹುದು.

ಕಿರುಗೂರಿನ ಗಯ್ಯಾಳಿಗಳು ಕಥೆಯಲ್ಲಿ ಅನಿರೀಕ್ಷಿತ ನವಿರಾದ ಅಂಶಗಳು ಕಾಣಬಹುದು.

ಒಟ್ಟಾರೆಯಾಗಿ ಪೂರ್ಣಚಂದ್ರ ತೇಜಸ್ವಿಯವರ ಕಥೆಗಳು ಹಿಂದಿನಿಂದ ಇಂದಿನವರೆಗೆ ಸಾರ್ವತ್ರಿಕತೆಯ ಮೌಲ್ಯಗಳನ್ನು ಬಿಂಬಿಸುತ್ತವೆ.

**ಪರಾಮರ್ಶನ ಗ್ರಂಥಗಳು**

1) ಅಬಚೂರಿನ ಪೋಸ್ಟಾಫೀಸು – ಕೆ.ಪಿ. ಪೂರ್ಣಚಂದ್ರ ತೇಜಸ್ವಿ

2) ಹುಲಿಯೂರಿನ ಸರಹದ್ದು– ಕೆ.ಪಿ. ಪೂರ್ಣಚಂದ್ರ ತೇಜಸ್ವಿ

3) ಕಿರುಗೂರಿನ ಗಯಾಳಿಗಳು– ಕೆ.ಪಿ. ಪೂರ್ಣಚಂದ್ರ ತೇಜಸ್ವಿ

4) ತೇಜಸ್ವಿಯವರ ಬದುಕು ಬರಹ– ಮಹೇಶ್ವರಯ್ಯ

5) ಹೊಸಗನ್ನಡ ಸಾಹಿತ್ಯ ಚರಿತ್ರೆ– ಶೇಷಗಿರಿರಾವ್.ಎಲ್.ಎಸ್

6) ಕಥನ ಸಾಹಿತ್ಯ – ಜಿ.ಎಸ್. ಅಮೂರ

7) ಸಣ್ಣ ಕಥೆಗಳು – ಜಿ.ಹೆಚ್.ನಾಯಕ್

8) ಹೊಸಗನ್ನಡ ಸಾಹಿತ್ಯ – ಎನ್.ಎಸ್.ಭಗವತಿ / ಎಚ್.ಎಸ್. ಮೇಲಿನಮನಿ